# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 660 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಾಂತರಾಮ್ ಬುಡ್ನ ಸಿದ್ದಿ(ನಾಮನಿರ್ದೇಶನ) |
| ಉತ್ತರಿಸಬೇಕಾದ ದಿನಾಂಕ | 17.12.2021 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಉನ್ನತ ಕನ್ನಡ ಜಿಲ್ಲೆಯ ಕುಂಬ್ರಿ ಮಾರಾಠಿ ಸಮುದಾಯಕ್ಕೆ ಯಾವ ವರ್ಗದಡಿ ಜಾತಿ ಪ್ರಮಾಣ ಪತ್ರ ನೀಡಲಾಗುತ್ತಿದೆ; | ಸರ್ಕಾರದ ಆದೇಶ ಸಂಖ್ಯೆ:ಸಕಇ 225 ಬಿಸಿಎ 2000, ದಿನಾಂಕ:30.03.2000ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿನ ಪ್ರವರ್ಗ-1 ಕ್ರಮ ಸಂಖ್ಯೆ:31ರಲ್ಲಿ ಕುಂಬ್ರಿ ಮರಾಠಿ (ಉತ್ತರ ಕನ್ನಡ ಜಿಲ್ಲೆ) ಜಾತಿ ಸೇರಿರುತ್ತದೆ. ಕುಂಬ್ರಿ ಮರಾಠಿ ಜಾತಿ ಪ್ರವರ್ಗ-1ರಡಿ ಜಾತಿ ಪ್ರಮಾಣ ಪತ್ರ ಪಡೆಯಲು ಅರ್ಹತೆ ಹೊಂದಿದೆ. ಪ್ರವರ್ಗ-1ರಲ್ಲಿ ಬರುವ ಜಾತಿಗಳಿಗೆ ಶೇಕಡ 4ರಷ್ಟು ಮೀಸಲಾತಿಯನ್ನು ನಿಗದಿಪಡಿಸಲಾಗಿದೆ. |
| ಆ) | ಹಾಗೆ ನೀಡುವ ಜಾತಿ ಪ್ರಮಾಣ ಪತ್ರವು ಯಾವ ಯಾವ ಮೀಸಲಾತಿಗೆ ಉಪಯೋಗವಾಗುತ್ತಿದೆ; | ಕುಂಬ್ರಿ ಮರಾಠಿ ಜಾತಿಯು, ಕರ್ನಾಟಕ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ವಿದ್ಯಾಸಂಸ್ಥೆಗಳಲ್ಲಿ ಪ್ರವೇಶ ಮತ್ತು ಉದ್ಯೋಗ ನೇಮಕಾತಿಗಳಲ್ಲಿ ಮೀಸಲಾತಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ. |
| ಇ) | ಈ ಸಮುದಾಯಕ್ಕೆ ರಾಜಕೀಯ ಮೀಸಲಾತಿ ನೀಡಲಾಗುತ್ತಿದ್ದೆಯೇ?(ವಿವರ ನೀಡುವುದು) | ಕರ್ನಾಟಕ ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸಲು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 5 ಜಿಪಸ 95, ದಿನಾಂಕ: 13.01.1995ನ್ನು ಪ್ರಕಟಿಸಿರುತ್ತದೆ.<br>ಈ ಅಧಿಸೂಚನೆಯಲ್ಲಿ ನಮೂದಿಸಿರುವ ಹಿಂದುಳಿದ ವರ್ಗ 'ಅ' ಮತ್ತು ಹಿಂದುಳಿದ ವರ್ಗ 'ಬ' ಎಂದು ವಿಂಗಡಿಸಿ ಅಧಿಸೂಚನೆಯಲ್ಲಿ ನಮೂದಿಸಲಾಗಿರುತ್ತದೆ. ಈ ಪಟ್ಟಿಯಲ್ಲಿ 'ಕುಂಬ್ರಿ ಮರಾಠಿ' ಎಂಬ ಸಮುದಾಯವನ್ನು ಗುರುತಿಸಿರುವುದಿಲ್ಲ. |

ಸಂಖ್ಯೆ: ಹಿಂವಕ 335 ಬಿಸಿಎ 2021

(ಕೋಟಾ ಶ್ರೀನಿವಾಸ ಪೂಜಾರಿ)